## ಸುದ್ದಿ ಸಿಂಚನ

### ಜಿಲ್ಲೆಯ ಹೆಸರು ಬದಲಾವಣೆ ಸ್ವಾಗತಾರ್ಹ



ಕನಕಪುರ: ರಾಮನಗರ ಜಿಲ್ಲೆಯ ಹೆಸರು ಬೆಂಗಳೂರು ದಕ್ಷಿಣ ಜಿಲ್ಲೆ ಆದಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಾಗುವುದು. ರಾಜ್ಯ ಸರ್ಕಾರ ಈ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಘೋಷಿಸಬೇಕು ಎಂದು ಟಿಎಪಿಸಿಎಂಎಸ್ ಅಧ್ಯಕ್ಷ ಚಂದ್ರಶೇಖರ್ ಒತ್ತಾಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಈ ಜಿಲ್ಲೆಯು ಬೆಂಗಳೂರು ದಕ್ಷಿಣವೆಂದು ನಾಮಕರಣಗೊಂಡರೂ ಸಹ ಈ ಜಿಲ್ಲಾ ಕೇಂದ್ರ ಮುಂದುವರಿಯಬೇಕು, ಜಿಲ್ಲೆ ಬೆಂಗಳೂರು ದಕ್ಷಿಣ ಆಗುವುದರಿಂದ ಎಲ್ಲಾ ತಾಲೂಕುಗಳಿಗೂ ಅನುಕೂಲಗಳು ದೊರಕಲಿವೆ, ಹೆಚ್ಚಿನ ಅಭಿವೃದ್ಧಿ ನಿರೀಕ್ಷಿಸಬಹುದಾಗಿದೆ, ಬ್ರ್ಯಾಂಡ್ ಬೆಂಗಳೂರು ಆದಲ್ಲಿ ಇಲ್ಲಿ ತಯಾರಾಗುವ ರೇಷ್ಮೆ ನೂಲಿಗೆ ವಿಶ್ವ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ. ಅಂತಾರಾಷ್ಟ್ರೀಯ ಮಟ್ಟದ ಹೂಡಿಕೆದಾರರನ್ನು ಸೆಳೆಯಬಹುದು. ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ಬೆಂಗಳೂರಿನ ಉಪನಗರಗಳನ್ನಾಗಿ ಅಭಿವೃದ್ಧಿ ಮಾಡಬಹುದು. ಇಷ್ಟೆಲ್ಲಾ ಅನುಕೂಲ ಸಿಗುವುದ ರಿಂದಲೇ ಡಿಸಿಎಂ ಡಿ.ಕೆ.ಶಿವಕುಮಾರ್ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಮಾಡಲು ಸರ್ಕಾರದ ಮೇಲೆ ಒತ್ತಡ ಹೇರಿರುವುದು ಸ್ವಾಗತಾರ್ಹ ಎಂದು ತಿಳಿಸಿದ್ದಾರೆ.

### ಘಾಟಿ ಸುಬ್ರಹ್ಮಣ್ಯ ಪ್ರಾಧಿಕಾರದ ಉಪ ಕಾರ್ಯದರ್ಶಿ ನೇಮಕ



ದೊಡ್ಡಬಳ್ಳಾಪುರ: ತಾಲೂಕಿನ ಘಾಟಿ ಸುಬ್ರಹ್ಮಣ್ಯ ದೇವಾಲಯದಲ್ಲಿ ಪ್ರಸ್ತುತ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ ಎಂ.ನಾರಾಯಣಸ್ವಾಮಿ ಅವರನ್ನು ಸರ್ಕಾರ ನೂತನವಾಗಿ ರಚಿಸಿರುವ ಘಾಟಿ ಸುಬ್ರಹ್ಮಣ್ಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಉಪ ಕಾರ್ಯದರ್ಶಿಯಾಗಿ ನೇಮಕ ಮಾಡಿದೆ. ಈ ಕುರಿತು ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಅಧೀನ ಕಾರ್ಯದರ್ಶಿ ಕೆ.ಪಿ.ಹೇಮಂತರಾಜು ಅಧಿಸೂಚನೆ ಹೊರಡಿಸಿದ್ದಾರೆ.

# ವಿಜಯೇಂದ್ರ ಸೇರಿ ಹಲವರ ಬಂಧನ, ಬಿಡುಗಡೆ

## ಕುಂಬಳಗೂಡು ಬಳಿ ಪೊಲೀಸರ ವಶಕ್ಕೆ | ಮುಡಾ ಹಗರಣದ ವಿರುದ್ಧ ಮೈಸೂರಿನ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ಬಿಜೆಪಿಗರು

• **ಕನ್ನಡಪ್ರಭ ವಾರ್ತೆ** ರಾಮನಗರ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಬಹುಕೋಟಿ ಹಗರಣವನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಕೆಲ ಶಾಸಕರನ್ನು ಪೊಲೀಸರು ಕುಂಬಳಗೂಡು ಬಳಿ ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಮುಡಾ ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ, ಮೈಸೂರಿನಲ್ಲಿ ಶುಕ್ರವಾರ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಶಾಸಕ ಮುನಿರತ್ನ ಸೇರಿದಂತೆ ಮುಖಂಡರು ಬಿಡದಿ-ರಾಮನಗರ ಮಾರ್ಗವಾಗಿ ತೆರಳುತ್ತಿದ್ದರು.

ಬೆಂಗಳೂರು ದಕ್ಷಿಣ ಜಿಲ್ಲೆ ವ್ಯಾಪ್ತಿಯ ಕಣಮಿಣಕೆ ಬಳಿಯ ಬೆಂಗಳೂರು - ಮೈಸೂರು ಟೋಲ್ ಪ್ಲಾಜಾ ಬಳಿ ಬೆಳಿಗ್ಗೆ 10.20ರ ವೇಳೆಗೆ ಪೊಲೀಸರು ಎಲ್ಲ ನಾಯಕರನ್ನು ವಶಕ್ಕೆ ಪಡೆದರು.

ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ನೇತೃತ್ವದಲ್ಲಿ ಎಎಸ್ಪಿ , ಡಿವೈಎಸ್ಪಿ ಸಹಿತ ಪೊಲೀಸ್ ಅಕಾರಿಗಳ ತಂಡ ಬೆಂಗಳೂರಿನಿಂದ ಪ್ರತಿಭಟನೆಗೆ ಹೊರಟಿದ್ದ ವಾಹನಗಳನ್ನು ತಡೆದು ನಿಲ್ಲಿಸಿದರು. ರಾಜರಾಜೇಶ್ವರಿನಗರ ಕ್ಷೇತ್ರದ ಶಾಸಕ ಮುನಿರತ್ನ, ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ. ಕಷ್ಣಪ್ಪ, ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಕಾರ್ಯದರ್ಶಿ ತಿಮ್ಮೇಶ್ ಗೌಡ ಸೇರಿದಂತೆ ಕೆಲ ಬಿಜೆಪಿ ಮುಖಂಡರನ್ನು ವಶಕ್ಕೆ ತೆಗೆದುಕೊಂಡು ಬಿಡದಿ ಪೊಲೀಸ್ ಠಾಣೆಗೆ ಕರೆದೊಯ್ದರು.ಬಿಜೆಪಿ ರಾಜ್ಯಾಧ್ಯಕ್ಷರು , ಶಾಸಕರು ಹಾಗೂ ನಾಯಕರನ್ನು 20 ನಿಮಿಷಗಳ ಕಾಲ ಬಿಡದಿ ಪೊಲೀಸ್ ಠಾಣೆಯಲ್ಲಿ ಕೂರಿಸಿ, ನಂತರ ಹೊರ ಕಳುಹಿಸಲಾಯಿತು. ಈ ವಿಷಯ ತಿಳಿಯುತ್ತಿದ್ದಂತೆ ಠಾಣೆಯಮುಂಭಾಗಬಿಜೆಪಿ-ಜೆಡಿಎಸ್ಮೈತ್ರಿಕೂಟದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.ಬಿಡದಿ ಹೋಬಳಿ ಘಟಕದ ಬಿಜೆಪಿ ಅಧ್ಯಕ್ಷ ಪ್ರಸನ್ನಕುಮಾರ್, ಜಿಲ್ಲಾ ಕಾರ್ಯದರ್ಶಿ ಸಂದೀಪ್, ಬಾಳೆಮಂಡಿ ಶಿವಣ್ಣ, ಹೊಸೂರು ಮಂಜುನಾಥ್, ಕಷ್ಣಮುಂತಾದವರು ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.ಬಿಡದಿ ಠಾಣೆಯಿಂದ ಹೊರಬಂದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸುದ್ದಿಗಾರರೊಂದಿಗೆ ಮಾತನಾಡಿ, ನ್ಯಾಯಯುತ ಹೋರಾಟಕ್ಕೆ ತೆರಳುತ್ತಿದ್ದವರನ್ನು ತಡೆದಿರುವುದು ಖಂಡನೀಯ. ಬಂಧನದ ಮೂಲಕ ತಡೆಯುವುದು ಹತ್ತಿಕ್ಕುವುದರಿಂದ ನಮ್ಮ ಹೋರಾಟ ನಿಲ್ಲುವುದಿಲ್ಲ. ವಿಧಾನಸಭಾ ಅವೇಶನದಲ್ಲಿ ಮೈಸೂರು ಮೂಡಾ ನಿವೇಶನ ಹಗರಣದ ಬಗ್ಗೆ ಪ್ರಶ್ನಿಸುತ್ತೇವೆ ಎಂದು ಪ್ರತಿಕ್ರಿಯಿಸಿದರು.



ಬಿಡದಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸುದ್ದಿಗಾರರೊಂದಿಗೆ ಮಾತನಾಡಿದರು.

### ಬೆಂ-ಮೈ ಎಕ್ಸ್‌ಪ್ರೆಸ್ ವೇನಲ್ಲಿ ಪೊಲೀಸರ ಸರ್ಪಗಾವಲು

ಮುಡಾ ಹಗರಣದ ವಿರುದ್ಧ ಬಿಜೆಪಿ ಮೈಸೂರಿನಲ್ಲಿ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆಯಲ್ಲಿ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಪಾಲ್ಗೊಳ್ಳುವುದನ್ನು ತಪ್ಪಿಸುವ ಸಲುವಾಗಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಪೊಲೀಸರ ಸರ್ಪಗಾವಲು ಹಾಕಲಾಗಿತ್ತು. ಕಣಮಿಣಕೆ ಟೋಲ್ ಪ್ಲಾಜಾ, ಮಂಚನಾಯಕನಹಳ್ಳಿ, ಬಿಡದಿ, ಸಂಗಬಸವನದೊಡ್ಡಿ, ಭೈರಾಪಟ್ಟಣ ಹಾಗೂ ಸರ್ವಿಸ್ ರಸ್ತೆಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಅಲ್ಲದೆ, ರಾಮನಗರ, ಕನಕಪುರ, ಚನ್ನಪಟ್ಟಣ ಹಾಗೂ ಮಾಗಡಿ ತಾಲೂಕುಗಳ ಪ್ರಮುಖ ರಸ್ತೆ, ವೃತ್ತಗಳಲ್ಲಿ ಪೊಲೀಸರು ಬ್ಯಾರಿಕೇಟ್ ಹಾಕಿಕೊಂಡು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು -ಮೈಸೂರಿಗೆ ತೆರಳುತ್ತಿದ್ದ ಬಿಜೆಪಿ ಮುಖಂಡರು, ಕಾರ್ಯಕರ್ತರನ್ನು ವಶಕ್ಕೆ ಪಡೆದರು.

### ಬಿಜೆಪಿ ಜಿಲ್ಲಾ ಮುಖಂಡರ ಬಂಧನ, ಬಿಡುಗಡೆ

ಮೈಸೂರಿನ ಪ್ರತಿಭಟನೆಯಲ್ಲಿ ಭಾಗಿಯಾಗಲು ರಾಮನಗರದಿಂದ ತೆರಳುತ್ತಿದ್ದ ಬಿಜೆಪಿ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆ ಮಾಡಿದರು. ಕಾರು ಸೇರಿದಂತೆ ವಿವಿಧ ವಾಹನಗಳಲ್ಲಿ ಮೈಸೂರಿಗೆ ತೆರಳುತ್ತಿದ್ದ ಮುಖಂಡರು ಹಾಗೂ ಕಾರ್ಯಕರ್ತರ ವಾಹನವನ್ನು ನಗರದ ಪೊಲೀಸ್ ಭವನ ಎದುರಿನ ವೃತ್ತದ ಬಳಿ ರಸ್ತೆಗೆ ಬ್ಯಾರಿಕೇಡ್ ಹಾಕಿ ಕಾಯುತ್ತಿದ್ದ ಪೊಲೀಸರು ತಡೆದರು. ವಾಹನದಲ್ಲಿದ್ದ ಮಹಿಳಾ ಮತ್ತು ಪುರುಷ ಕಾರ್ಯಕರ್ತರನ್ನು ಕೆಳಕ್ಕಿಳಿಸಿದ ಪೊಲೀಸರು ಅವರೆಲ್ಲರನ್ನು ಪೊಲೀಸ್ ವಾಹನ ಮತ್ತು ಕೆಎಸ್ ಆರ್‌ಟಿಸಿ ಬಸ್ ನಲ್ಲಿ ಕರೆದೊಯ್ದರು. ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ನಗರ ಘಟಕ ಅಧ್ಯಕ್ಷ ದರ್ಶನ್ ರೆಡ್ಡಿ ಸೇರಿದಂತೆ 10ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಖಾಸಗಿ ಕಲ್ಯಾಣ ಮಂಟಪದಲ್ಲಿ ಇರಿಸಿದರು. ಮಧ್ಯಾಹ್ನದ ನಂತರ ಎಲ್ಲರನ್ನು ಬಿಡುಗಡೆ ಮಾಡಿದರು.

## ಸಿಎಂ ರಾಜೀನಾಮೆಗೆ ಬಿಜೆಪಿ ಆಗ್ರಹ



ಕನಕಪುರ: ಮೈಸೂರಿನ ಮುಡಾದಲ್ಲಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರದ ನೈತಿಕ ಹೊಣೆ ಹೊತ್ತು ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಗ್ರಾಮಾಂತರ ಮಂಡಲಅಧ್ಯಕ್ಷಕೆ.ಪಿ.ಕುಮಾರ್ ಆಗ್ರಹಿಸಿದರು.

ನಗರದ ಚನ್ನಬಸಪ್ಪ ವೃತ್ತದಿಂದ ತಾಲೂಕು ಬಿಜೆಪಿ ಕಾರ್ಯಕರ್ತರೊಂದಿಗೆ ಮೈಸೂರಿನ ಮುಡಾ ಕಚೇರಿ ಮುತ್ತಿಗೆ ಹಾಕಲು ತೆರಳುತ್ತಿದ್ದ ವೇಳೆ ನಗರ ಆರಕ್ಷಕ ಸಿಬ್ಬಂದಿ ಅವರನ್ನು ಬಂಧಿಸಿ ಕರೆದೊಯ್ಯುವಾಗ ಸುದ್ದಿಗಾರರೊಂದಿಗೆಮಾತನಾಡಿದರು. ಅತ್ಯಂತ ಪ್ರಮಾಣಿಕ, ಸರಳ ಹಾಗೂ ಹಿಂದುಳಿದ ವರ್ಗಗಳ ಪರಮೋಚ್ಚ ನಾಯಕ ಎಂದುತಮ್ಮನ್ನುಬಿಂಬಿಸಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬದಿಂದಲೇ ಕೋಟ್ಯಂತರ ರುಪಾಯಿ ಭ್ರಷ್ಟಾಚಾರ ನಡೆದಿದ್ದರೂ ನನಗೂ ಅದಕ್ಕೂ ಸಂಬಂಧವಿಲ್ಲ ಎಂಬಂತೆ ಸರ್ಕಾರವೇ ನಮ್ಮ ಕುಟುಂಬಕ್ಕೆ 62 ಕೋಟಿ ರು. ಪರಿಹಾರ ನೀಡಬೇಕೆಂಬ ಅವರ ಧೋರಣೆ ಖಂಡನೀಯ ಎಂದರು.

ನಗರ ಮಂಡಲ ಅಧ್ಯಕ್ಷ ಕೆ.ಎಂ.ಮಂಜುನಾಥ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅನಿಲ್‌ಕುಮಾರ್, ಗ್ರಾಮಾಂತರ ಮಂಡಲಪ್ರಧಾನಕಾರ್ಯದರ್ಶಿ ಶಿವಮುತ್ತು, ಯುವ ಮೋರ್ಚಾ ಅಧ್ಯಕ್ಷ ಸುನಿಲ್, ಪ್ರಧಾನ ಕಾರ್ಯದರ್ಶಿ ಮಧುಸೂದನ್, ಜಿಲ್ಲಾ ಉಪಾಧ್ಯಕ್ಷ ಕೋಟೆ ರಾಜೇಶ್, ನಗರ ಘಟಕದ ಪ್ರದೇಶ ಕಾರ್ಯದರ್ಶಿಗಳಾದ ಗೋಪಾಲ್, ಆಟೋಕುಮಾರ್, ಮಹಿಳಾಮೋರ್ಚಾಪ್ರಮೀಳಾ, ಮುಖಂಡ ಕೃಷ್ಣಪ್ಪ ಹಾರಿದ್ದರು.

## ಪ್ರತಿಭಟನೆಗೆ ತೆರಳುತ್ತಿದ್ದ ಬಿಜೆಪಿಗರ ಬಂಧನ



ಚನ್ನಪಟ್ಟಣ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಗರಣಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ರಾಜ್ಯ ಬಿಜೆಪಿ ಘಟಕ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ತೆರಳುತ್ತಿದ್ದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಬಿಡುಗಡೆಗೊಳಿಸಿದರು. ಜಿಲ್ಲಾ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಹುಲುವಾಡಿ ದೇವರಾಜು ನೇತೃತ್ವದಲ್ಲಿ ನಗರದ ಗಾಂಧಿ ಭವನದ ಎದುರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದ ಬಳಿಕ ಬಿಜೆಪಿ ಕಾರ್ಯಕರ್ತರು ಮೈಸೂರಿಗೆ ತೆರಳಲು ಮುಂದಾಗುತ್ತಿದ್ದಂತೆ ಪೊಲೀಸರು ಪ್ರತಿಭಟನಾನಿರತರನ್ನು ವಶಕ್ಕೆಪಡೆದು ಒಂದು ಗಂಟೆ ಗೃಹಬಂಧನದಲ್ಲಿರಿಸಿ ನಂತರ ಬಿಡುಗಡೆಗೊಳಿಸಿದರು. ಹುಲುವಾಡಿ ದೇವರಾಜು ಮಾತನಾಡಿ, ಮುಡಾ ಹಗರಣದಲ್ಲಿ ರಾಜ್ಯದ ಮುಖ್ಯಮಂತ್ರಿಗಳೇ ನೇರ ಪಾಲುದಾರರಾಗಿದ್ದಾರೆ. ಇದು ಬಹುಕೋಟಿ ಹಗರಣವಾಗಿದೆ. ಹಗರಣವನ್ನು ಮುಚ್ಚಿಹಾಕುವ ಹುನ್ನಾರವನ್ನು ಸರ್ಕಾರ ನಡೆಸಿದೆ. ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಪ್ರತಿಭಟನೆ ಹತ್ತಿಕ್ಕುವ ಕೆಲಸ ಮಾಡುತ್ತಿರುವುದು ಖಂಡನೀಯ ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ರಾಜು, ನಗರ ಘಟಕದ ಶಿವು, ಮುಖಂಡರಾದ ಶಿವಲಿಂಗಯ್ಯ, ಮೈತ್ರಿಗೌಡ, ನಿಂಗೇಗೌಡ, ಮಲ್ಲೇಶ್, ಶಿವಕುಮಾರ್, ಸತೀಶ್ ಸೇರಿ ಹಲವರು ಉಪಸ್ಥಿತರಿದ್ದರು.

# ಕಾರ್ಮಿಕ ವಿರೋಧಿ ನೀತಿಗಳನ್ನು ರದ್ದುಪಡಿಸಿ

## ತಾಲೂಕು ಕಚೇರಿ ಮುಂದೆ ಸಿಐಟಿಯು ಪ್ರತಿಭಟನೆ | ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ

• **ಕನ್ನಡಪ್ರಭ ವಾರ್ತೆ** ದೊಡ್ಡಬಳ್ಳಾಪುರ

ಕಾರ್ಮಿಕ ವಿರೋಧಿ ನೀತಿಗಳನ್ನು ರದ್ದುಗೊಳಿಸುವಂತೆ ರಾಷ್ಟ್ರವ್ಯಾಪಿ ಸಿಐಟಿಯು ಸಂಘಟನೆ ವತಿಯಿಂದ ನಡೆದ ಬೇಡಿಕೆಗಳ ದಿನದ ಅಂಗವಾಗಿ ನಗರದ ತಾಲೂಕು ಕಚೇರಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಿಐಟಿಯು ಸಂಚಾಲಕ ಪಿ.ಎ.ವೆಂಕಟೇಶ್ ಮಾತನಾಡಿ, ಒಂದೂವರೆ ವರ್ಷಗಳ ಕಾಲ ನಿರಂತರ ಧರಣಿಗೆ ಮಣಿದ ಕೇಂದ್ರ ಸರ್ಕಾರ ರೈತ ವಿರೋಧಿ ಕೃಷಿ ಕಾನೂನುಗಳನ್ನು ವಾಪಸ್ ಪಡೆಯುವುದಾಗಿ ಘೋಷಣೆ ಮಾಡಿತ್ತು. ಆದರೆ ಇದು ರಾಜ್ಯದಲ್ಲಿ ಇದುವರೆಗೂ ಜಾರಿಗೆ ಬಂದಿಲ್ಲ. ಕೃಷಿ ಬೆಳೆಗಳಿಗೆ ಲಾಭದಾಯಕ ಬೆಂಬಲ ಬೆಲೆ ಖಾತರಿಪಡಿಸುವ ಕೆಲಸವೂ ಆಗಿಲ್ಲ. ಎಪಿಎಂಸಿ ವ್ಯವಸ್ಥೆಯನ್ನು ಬಲಗೊಳಿಸಲು ರಾಜ್ಯ ಸರ್ಕಾರ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಗೊಬ್ಬರ ಒಳಗೊಂಡಂತೆ ಕೃಷಿ ಹಿಡುವಳಿಗಳಿಗೆ ಸಬ್ಸಿಡಿ ಕಡಿತಗೊಳಿಸುವ ನೀತಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಬಿಡಬೇಕು ಎಂದು ಆಗ್ರಹಿಸಿದರು.

**ಕನಿಷ್ಠ ವೇತನ ನಿಗದಿಪಡಿಸಿ:** ಎಲ್. ಆರ್.ನಳಿನಾಕ್ಷಿ ಮಾತನಾಡಿ, ದೇಶದ ಐಕ್ಯತೆಯನ್ನು ಛಿದ್ರಗೊಳಿಸುವ, ಸೌಹಾರ್ದತೆಯನ್ನು ಹಾಳು ಮಾಡುವ ಕೃತ್ಯಗಳನ್ನು ಹಾಗೂ ಶಕ್ತಿಗಳನ್ನು ನಿಗ್ರಹಿಸಬೇಕು. ಸಂವಿಧಾನದ ಧರ್ಮ ನಿರಪೇಕ್ಷ ಮೌಲ್ಯಗಳನ್ನು ಸಂರಕ್ಷಿಸಬೇಕಿದೆ. ಕನಿಷ್ಠ ವೇತನವನ್ನು ಅಕುಶಲ ಕಾರ್ಮಿಕರಿಗೆ ₹31 ಸಾವಿರ ಹಾಗೂ ಹೆಚ್ಚಿನ ಕೌಶಲ್ಯದ ಕಾರ್ಮಿಕರಿಗೆ ಪ್ರತಿ ಹಂತಕ್ಕೆ ಶೇ.15ರಷ್ಟು ಹೆಚ್ಚು ನಿಗದಿಪಡಿಸಬೇಕು. ಗ್ರಾಹಕ ಬೆಲೆ ಸೂಚ್ಯಂಕದ ಪ್ರತಿ ಅಂತದ ಹೆಚ್ಚಳಕ್ಕೆ ಪ್ರತಿ ದಿನಕ್ಕೆ 6 ಪೈಸೆಗಳ ತುಟ್ಟಿಭತ್ಯೆ ನಿಗದಿಪಡಿಸಬೇಕು, ಬೆಲೆ ಸೂಚ್ಯಂಕವನ್ನು ಪ್ರಾಮಾಣಿಕವಾಗಿ ಪ್ರಕಟಿಸಬೇಕು. ಸರ್ವೋಚ್ಚನ್ಯಾಯಾಲಯದತೀರ್ಪಿನನ್ವಯ ವೈಜ್ಞಾನಿಕ ರೀತಿಯಲ್ಲಿ ಕನಿಷ್ಠ ವೇತನವನ್ನು ನಿಗದಿಪಡಿಸಿ, ಸಮರ್ಪಕವಾಗಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

**ಕಾನೂನು ತಿದ್ದುಪಡಿಗೆ ಕ್ರಮ ಕೈಗೊಳ್ಳಿ:** ಅನಿಲ್ ಗುಪ್ತ ಮತ್ತು ಇನಾಯಿತ್‌ಪಾಷಾ ಮಾತನಾಡಿ, ಪ್ರತಿ ಜಿಲ್ಲಾ ಮಟ್ಟದಲ್ಲಿ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಕೈಗಾರಿಕಾ ವಿವಾದಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಇತ್ಯರ್ಥಗೊಳ್ಳಲು ಸೂಕ್ತ ಕಾನೂನು ತಿದ್ದುಪಡಿಗಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಸಾರ್ವಜನಿಕ ಆಸ್ತಿ ಹಾಗೂ ಹಣವನ್ನು ಲೂಟಿ ಮಾಡಲು ಖಾಸಗಿ ಕಾರ್ಪೊರೇಟ್ ಕಂಪನಿಗಳಿಗೆ ಅವಕಾಶ ನೀಡುವ ಎನ್‌ಎಲ್ ಮತ್ತು ಐಸಿಬಿ ಕೋಡ್‌ಗಳಲ್ಲಿನ ಜನವಿರೋಧಿ ಕಾರ್ಪೊರೇಟ್ ಪರವಾದ ಕಾನೂನುಗಳನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

**ಇಎಸ್‌ಐ ಆಸ್ಪತ್ರೆ ಉದ್ಘಾಟಿಸಿ:** ರೇಣುಕಾರಾಧ್ಯ ಮಾತನಾಡಿ, ರಾಜ್ಯದಲ್ಲಿ ಮೊದಲ ಬಾರಿಗೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ಶಂಕುಸ್ಥಾಪನೆಯಾಗಿ, ಕಾಮಗಾರಿ ಮುಕ್ತಾಯವಾಗಿ ಒಂದುವರೆ ವರ್ಷ ಕಳೆದಿದ್ದರೂ ಸಹ ರಾಜಕೀಯ ಉದ್ದೇಶಗಳಿಗಾಗಿ 100 ಹಾಸಿಗೆಗಳ ಇಎಸ್‌ಐ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ ಭಾಗ್ಯ ಕಾಣದೆ, ಕಾರ್ಮಿಕ ಸೇವೆಗೆ ಲಭ್ಯವಾಗದೇ ಪಾಳುಬಿದ್ದಿದೆ. ತಾಲೂಕಿನ ಬಾಶೆಟ್ಟಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣ ಕಾಮಗಾರಿ ಮುಕ್ತಾಯವಾಗಿರುವ ಇಎಸ್‌ಐ ಆಸ್ಪತ್ರೆಯನ್ನು ಕೂಡಲೇ ಉದ್ಘಾಟಿಸಬೇಕು ಎಂದರು.ಪ್ರತಿಭಟನೆಯಲ್ಲಿವಿವಿಧಕಾರ್ಮಿಕ ಸಂಘಟನೆ ಮುಖಂಡರಾದ ಬಿ.ನರೇಶ್ ಕುಮಾರ್, ಸಾದಿಕ್ ಪಾಷ, ಮುನೇಗೌಡ, ಎಲ್.ಸಿ.ಸುಮಾ, ಪಿ.ಕೆ.ವೆಂಕಟೇಶ್ ಮತ್ತಿತರರು ಭಾಗವಹಿಸಿದ್ದರು.




## ರೈಲಿಗೆ ಸಿಲುಕಿ ರೈತ ದಂಪತಿ ಸಾವು

ದೊಡ್ಡಬಳ್ಳಾಪುರ: ಜಮೀನಿಗೆ ತೆರಳಿದ್ದ ರೈತ ದಂಪತಿ ರೈಲ್ವೆ ಹಳಿ ದಾಟುವ ವೇಳೆ ರೈಲಿಗೆ ಸಿಲುಕಿ ಸಾವನಪ್ಪಿರುವ ಘಟನೆ ತಾಲೂಕಿನ ಮಾಕಳಿದುರ್ಗದ ಬಳಿ ಶುಕ್ರವಾರ ಸಂಭವಿಸಿದೆ.ಮೃತರನ್ನು ತಾಲೂಕಿನ ಕೆಳಗಿನ ನಾಯಕರಂಡಹಳ್ಳಿ ಚಂದ್ರನಾಯಕ(47), ಜಯಾಬಾಯಿ(43) ಎಂದು ಗುರುತಿಸಲಾಗಿದೆ. ಘಾಟಿ ಗೋಶಾಲೆ ಸಮೀಪವಿರುವ ಜಮೀನಿಗೆ ಹೋಗಿ ಬರುತ್ತಿದ್ದ ದಂಪತಿಗೆ ತಿರುವಿನಲ್ಲಿ ರೈಲು ಬರುವುದು ಕಾಣದೆ ಹಳಿ ದಾಟುವ ವೇಳೆ ಏಕಾಏಕಿ ಬಂದ ರೈಲು ಡಿಕ್ಕಿ ಹೊಡೆದು ಸತ್ತಿರಬಹುದು ಎನ್ನಲಾಗಿದೆ. ಸ್ಥಳಕ್ಕೆ ದೊಡ್ಡಬಳ್ಳಾಪುರ ರೈಲ್ವೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಅವಧಿ ಮೀರಿದ ಔಷಧ ಬಳಸಿದರೆ ಅಮಾನತು

ರಾಮನಗರ : ಜಿಲ್ಲೆಯಲ್ಲಿ ಅವಧಿ ಮೀರಿದ ಔಷಧಗಳ ಬಳಕೆ ಅಥವಾ ವಿತರಿಸಿದರೆ ಸಂಬಂಧಿಸಿದವರನ್ನು ಮುಲಾಜಿಲ್ಲದೆ ಅಮಾನತು ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಯಶವಂತ ವಿ.ಗುರುಕರ್ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲಾ ಮಟ್ಟದ ಲಸಿಕೆ ಕಾರ್ಯಪಡೆ ಸಮಿತಿ ಸಭೆಯಲ್ಲಿ ಮಾತನಾಡಿ, ರಾಮನಗರದ ಕೂಗಳತೆಯಲ್ಲಿರುವ ರಾಜಧಾನಿ ಬೆಂಗಳೂರಿನಿಂದ ಆರೋಗ್ಯ ಇಲಾಖೆಗೆ ಅಗತ್ಯವಿರುವ ಔಷಧ, ಮಾತ್ರೆ ತರಲು ಕಷ್ಟವೇನು? ಅವಧಿ ಮೀರಿದ ಔಷಧ ಮಾತ್ರೆಗಳಿದ್ದರೆ ನನ್ನ ಗಮನಕ್ಕೆ ತರಬೇಕು. ಅದರಲ್ಲೂ ಮುಖ್ಯವಾಗಿ ಮಕ್ಕಳಿಗೆ ನೀಡುವ ಲಸಿಕೆ ಎರಡೆರಡು ಬಾರಿ ಪರೀಕ್ಷಿಸಿಯೇ ನೀಡಬೇಕು. ಅವಧಿ ಮೀರಿದ ಔಷಧ ಬಳಕೆ ಸಲ್ಲ, ಈ ಬಗ್ಗೆ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ವೈಯಕ್ತಿಕ ಗಮನ ಹರಿಸಬೇಕು ಎಂದರು.

ಲಸಿಕೆಗಳು, ಔಷಧಿಗಳು, ಮಾತ್ರೆ ಸೇರಿದಂತೆ ಮೆಡಿಕಲ್ ಸರಂಜಾಮುಗಳನ್ನು ದಾಸ್ತಾನಿಗೆ ತೆಗೆದುಕೊಳ್ಳುವ ಸಮಯದಲ್ಲಿ ಅವುಗಳ ಅವಧಿ ಪರಿಶೀಲಿಸಬೇಕು. ಒಂದು ವೇಳೆ ಅವಧಿ ಮುಕ್ತಾಯಗೊಂಡಿದ್ದರೆ ವಿಲೇವಾರಿ ಮಾಡಬೇಕು. ಮಾಗಡಿಯಲ್ಲಿ ಅವಧಿ ಮೀರಿದ ಗ್ಲೂಕೋಸ್ ನೀಡಿಕೆ ಪ್ರಕರಣ ಉದಾಹರಿಸಿ ಮಾತನಾಡಿ, ಇನ್ನು ಮುಂದೆ ಈ ಘಟನೆಗಳು ಮರುಕಳಿಸಿದರೆ ಸಂಬಂಧಿಸಿದವರನ್ನೇಹೊಣೆಗಾರರನ್ನಾಗಿಸಿ ಅಮಾನತು ಮಾಡಲಾಗುವುದು ಎಂದು ಎಚ್ಚರಿಸಿದರು.ಇದೂವರೆಗೂ ಜಿಲ್ಲೆಯಲ್ಲಿ ಒಟ್ಟು 93 ಡೆಂಘೀ ಪ್ರಕರಣಗಳು ವರದಿಯಾಗಿದ್ದು, ರೋಗಿಗಳಲ್ಲಿ ಡೆಂಘೀ ಲಕ್ಷಣಗಳು ಪತ್ತೆಯಾದರೆ ರಾಮನಗರ ಜಿಲ್ಲಾಸ್ಪತ್ರೆಯಲ್ಲಿ ತೆರೆದಿರುವ ವಾರ್‌ರೂಮ್ ಸಂಖ್ಯೆ 9449843266 ಇಲ್ಲಿಗೆ ಸಾರ್ವಜನಿಕರು ಸಂಪರ್ಕಿಸಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಿರಂಜನ್ ತಿಳಿಸಿದರು.

ಸಭೆಯಲ್ಲಿ ಆರ್‌ಸಿಎಚ್ ಅಧಿಕಾರಿ ಡಾ. ರಾಜು, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಮಂಜುನಾಥ್, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ಶಶಿಧರ್, ಜಿಲ್ಲಾ ಕ್ಷಯರೋಗ ನಿಯಂತ್ರಣಧಿಕಾರಿ ಡಾ. ಕುಮಾರ್, ಚನ್ನಪಟ್ಟಣ, ರಾಮನಗರ, ಕನಕಪುರ, ಮಾಗಡಿ ತಾಲೂಕು ಆರೋಗ್ಯಾಧಿಕಾರಿಗಳು ಉಪಸ್ಥಿತರಿದ್ದರು.



**ಪ್ರಕಟಣೆ**

ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಹೋಬಳಿ ಹಾಗೂ ಗ್ರಾಮದ ನಿವಾಸಿಯಾದ **ಲೋಕೇಶ್ ಕೆ.ಎಸ್** ಎಂಬ ನಾನು ಕನಕಪುರ ನಗರದ ರೂರಲ್ ಕಾಲೇಜಿನಲ್ಲಿ ಬಿಎಸ್‌ಸಿ ಪದವಿ ವ್ಯಾಸಂಗ ಮಾಡಿದ್ದು ಕಾಲೇಜಿನಿಂದ ನೀಡಿದ್ದ **ಬಿಎಸ್‌ಸಿ ಪದವಿ ತರಗತಿಯ (ರಿ.ನಂ–872RJ 026) ಮೂಲ ಅಂಕಪಟ್ಟಿ** ಕಳೆದು ಹೋಗಿರುವ ಹಿನ್ನೆಲೆಯಲ್ಲಿ ಕೋಡಿಹಳ್ಳಿ ಪೊಲೀಸ್ ಠಾಣೆಯಲ್ಲಿ ದಿನಾಂಕ 10.07.2024 ರಂದು ದೂರನ್ನು ದಾಖಲಿಸಲಾಗಿದೆ.

**IN THE COURT OF THE 6th ADDL. DISTRICT AND SESSIONS JUDGE, BENGALURU RURAL DISTRICT AT BENGALURU**

**P & S.C. No. 26/2024**

**BETWEEN: Smt. Girijamma** W/o Sri. Ashok Kumar, D/o Late Jayaramaiah, Aged about 48 years, R/a. 24/11, 8th Cross, 1st N Block, Rajajinagara, Bengaluru - 560010. ...Petitioner

**AND: NIL ...Respondent**

**PUBLIC NOTICE**

Whereas the above named has made petition to this court under section 278 of Indian Succession Act for the grant of Letter of Administration in favour of the Petitioner in lieu of will dated : 20/04/1971, executed by Smt. Kempakka (grandmother of petitioner, died on: 08/05/1974), in favour of Jayaramaiah (petitioner's father, died on: 26/09/2006) in respect of schedule mentioned below.

Interested parties or general public or any quires or claims by any persons, are hereby called upon to appear before this court in person or by pleader duly instructed **on 29.08.2024 at 11 A.M.** to defend the above petition or claims failing which the non-appearance will be heard and declared as Ex-parte.

**SCHEDULE PROPERTY**

**Item No. 1:** All that piece and parcel of the immovable Agricultural property bearing Sy.No. 44/3 measuring 0.18 Guntas, situated at Yentaganahalli Village, Kasaba Hobli, Nelamangala Taluk, Bengaluru Rural District and the same is bounded on :- East By : Remaining land in same survey number, West By : Land belonging to Ranga Shamaiah, North By : Government oni (Government Road), South By : Land belonging to Muddirappa.

**Item No.2:** All that piece and parcel of the immovable property bearing Sy.No. 86/3, measuring 0.02 Guntas, situated at Yentaganahalli Village, Kasaba Hobli, Nelamangala Taluk, Bengaluru Rural District and the same is bounded on :- East By : Remaining land in same survey Number, West By : Land belonging to Lingamma, North By : Raja Kaluve, South By : Remaining land in same survey Number.

**Item No.3 :** All that piece and parcel of the immovable property bearing Sy.No. 13/4, measuring East to West 15 Gajas, North to South 5 Gajas situated at Yentaganahalli Village, Kasaba Hobli, Nelamangala Taluk, Bengaluru Rural District and the same is bounded on :- East by : Remaining land in same survey Number, West by : Land belonging to Anjanappa, North by : Remaining land in same survey Number, South by : Land belonging to Kendaiah Papaiah.

**Item No.4 :** All that piece and parcel of the immovable Agricultural property bearing Sy.No. 56, New Sy.No. 56/1 measuring 3 Acres 6 Guntas, situated at Doddakarenahalli Village, Kasaba Hobli, Nelamangala Taluk, Bengaluru Rural District and the same is bounded on :- East By : Land belonging to Chikkahanumanthaiah issay, West By : Land belonging to Lakshmakka, North By : Land belonging to Kendaiah Papaiah, South By : Land belonging to Jayaramaiah (Nimma Jameenu).

Given under my hand and seal of the court on this 9th day of July 2024.

**By order of the Court, Chief Administrative Officer, District & Sessions Court, Bangalore Rural District, Bangalore.**

Advocate for Petitioner :
**T M Venkata Reddy**
# 9/A, 3rd Floor, CBI Road, Vasanthappa Block, Ganganagar, Opp: KattiMaramma Temple, Bengaluru-560032.
Mob: 9972567178
Mail: tmvenkatareddy.advocate@gmail.com

**ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್**
(ಒಂದು ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಚೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

**ಇ-ಹರಾಜು ಸೂಚನೆ**

**2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೆಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ**

ಆದಾಗ್ಯೂ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

| ಕ್ರ. ಸಂ. | ಸಾಲದ ಖಾತಾ ಸಂಖ್ಯೆ | ಮೂಲ ಸಾಲಗಾರ/ ಸಹ-ಸಾಲಗಾರ/ ಜಾಮೀನುದಾರ/ಹೆಸರು | 13-2 ನೋಟೀಸ್ ದಿನಾಂಕ | ಸ್ವಾಧೀನತೆಯ ದಿನಾಂಕ | ಪ್ರಸ್ತುತ ಬಾಕಿ ಮೊತ್ತ ದಿನಾಂಕ 09.07.2024 ರಂದು ಇದ್ದಂತೆ | ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ | ಮೀಸಲು ಬೆಲೆ ಐಎನ್‌ಆರ್ | ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್ | ಇ-ಹರಾಜಿನ ದಿನಾಂಕ ಮತ್ತು ಸಮಯ | ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ |
|---|---|---|---|---|---|---|---|---|---|---|
| 1 | 34019630000436 & 34019410000465 | 1) ಶ್ರೀ ಶಶಿ ಕುಮಾರ್ ಡಿ, ಅಲ್ಲದೆ: ಮೆ॥. ಮಂಜುನಾಥ್ ಏಜೆನ್ಸೀಸ್, 2) ಶ್ರೀ ಮಾರಣ್ಣ ಡಿ, ಅಲ್ಲದೆ: ಮೆ॥. Maf ಪ್ರೈವೇಟ್ ಲಿಮಿಟೆಡ್. 3) ಶ್ರೀಮತಿ ಮಂಗಳಾ ಡಿ | 30-10-2023 | 03-04-2024 | ರೂ. 7,22,340/- (ಏಳು ಲಕ್ಷದ ಇಪ್ಪತ್ತೆರಡು ಸಾವಿರದ ಮೂರುನೂರ ನಲವತ್ತು ರೂ.ಗಳು ಮಾತ್ರ) | 24.07.2024 Time: 09:30 AM to 5:00 PM | ರೂ. 4,68,000/- (ನಾಲ್ಕು ಲಕ್ಷದ ಅರವತ್ತೆಂಟು ಸಾವಿರ ರೂ. ಮಾತ್ರ) | ರೂ. 46,800/- (ನಲವತ್ತಾರು ಸಾವಿರದ ಎಂಟುನೂರು ರೂ. ಗಳು ಮಾತ್ರ) | 14.08.2024 @ 02:00 PM | 13.08.2024, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071. |
| | ಷೆಡ್ಯೂಲ್ ಆಸ್ತಿ: ಸಕಲ ಸಮಸ್ತವೂ ಸೇರಿದ ಆಸ್ತಿ ಸೈಟ್ ನಂ.12, ಖಾತಾ ನಂ.146/12, ಇ-ಖಾತಾ ನಂ.150300700102700175, ಗಾಂಧಿ ಗ್ರಾಮ, ಹೊಸಸಂದ್ರ ದಾಖಲೆ, ಎಂಟಗಾನಹಳ್ಳಿ ಗ್ರಾಮ ಪಂಚಾಯತ್ ಕಸಬಾ ಹೋಬಳಿ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮತ್ತು ಚಕ್ಕುಬಂದಿ: ಪೂರ್ವದಿಂದ -ರಸ್ತೆ, ಪಶ್ಚಿಮದಿಂದ: ಖಾಸಗಿ ಆಸ್ತಿ, ಉತ್ತರದಿಂದ: ಸೈಟ್ ನಂ.11 ಮತ್ತು ದಕ್ಷಿಣದಿಂದ: ಸೈಟ್ ನಂ.13. ಅಳತೆ ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ ಒಟ್ಟಾರೆ ಅಳತೆ 1200 ಚದರ ಅಡಿ. | | | | | | | | | |
| 2 | 47039440000014 | 1) ಕುಮಾರ್ ಸಿ, ಮಾಲೀಕರು ಮೆ॥ ಟೈಲ್ಸ್ ಕಂಟ್ರಾಕ್ಟ್ ಬಿಸಿನೆಸ್, ಅಲ್ಲದೇ: ಮೆ॥ ಟೈಲ್ಸ್ ಕಂಟ್ರಾಕ್ಟ್ ಬಿಸಿನೆಸ್, 2) ಶ್ರೀಮತಿ ಹೇಮಾವತಿ ಎಚ್ | 24-01-2024 | 08-07-2024 | ರೂ. 4,71,340.60/- (ನಾಲ್ಕು ಲಕ್ಷದ ಎಪ್ಪತ್ತೊಂದು ಸಾವಿರದ ಮುನ್ನೂರ ನಲವತ್ತು ರೂ. ಮತ್ತು ಅರವತ್ತು ಪೈಸೆ ಮಾತ್ರ) | 24.04.2024 Time: 09:30 AM to 05:00 PM | ರೂ. 23,40,000/- (ಇಪ್ಪತ್ಮೂರು ಲಕ್ಷದ ನಲವತ್ತು ಸಾವಿರ ರೂ. ಮಾತ್ರ) | ರೂ. 2,34,000/- (ಎರಡು ಲಕ್ಷದ ಮೂವತ್ನಾಲ್ಕು ಸಾವಿರ ರೂ. ಗಳು ಮಾತ್ರ) | 14.08.2024 @ 02:00 PM | 13.08.2024, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071. |
| | ಷೆಡ್ಯೂಲ್ ಆಸ್ತಿ: ಸಕಲ ಸಮಸ್ತವೂ ಸೇರಿದ ವಸತಿ ಕಟ್ಟಡ ಗ್ರಾಮ ಪಂಚಾಯತ್ ಖಾತಾ ಸಂ. 147/142 ಮತ್ತು ಇ-ಖಾತಾ ನಂ.150300702001600145 ಅಳತೆ ಪೂರ್ವ-ಪಶ್ಚಿಮ: 9.144ಮೀ.ಗಳು ಮತ್ತು ಉತ್ತರ-ದಕ್ಷಿಣ:12.192 ಮೀ.ಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಗಳಕುಪ್ಪೆ ಗ್ರಾಮ, ಸೋಮಪುರ ಹೋಬಳಿ, ನೆಲಮಂಗಲ ತಾಲ್ಲೂಕು ಇಲ್ಲಿರುವ ಆಸ್ತಿಯ ಚಕ್ಕುಬಂದಿ-: ಪೂರ್ವದಲ್ಲಿ: ಗಂಗಮ್ಮರವರಿಗೆ ಸೇರಿದ ನಿವೇಶನ, ಪಶ್ಚಿಮದಲ್ಲಿ: ಶ್ರೀನಿವಾಸಯ್ಯರವರಿಗೆ ಸೇರಿದ ನಿವೇಶನ, ಉತ್ತರದಲ್ಲಿ: ಸರ್ಕಾರಿ ರಸ್ತೆ, ದಕ್ಷಿಣದಲ್ಲಿ: ರಸ್ತೆ. | | | | | | | | | |

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ ಮೆ॥-4 ಕ್ಲೋಸರ್ ಮೂಲಕ https://bankauctions.in & www.foreclosureindia.com. ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆ॥-4 ಕ್ಲೋಸರ್ ಸಂಪರ್ಕ ಶ್ರೀ ಎಂ ಶ್ರೀನಿವಾಸಲು, ಸಂಪರ್ಕ ಸಂ. 8142000809. Email id: info@bankauctions.in / srinivas@bankauctions.in.ಇವರನ್ನು ಸಂಪರ್ಕಿಸುವುದು.

ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧೀಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (ಮೊ.ಸಂ. 9590858249), ಶ್ರೀ ಉಮೇಶ್ (ಮೊಬೈಲ್ ಸಂ. 8050149617) ಮತ್ತು ಶ್ರೀಮತಿ ಸೈಯೇದ (ಮೊಬೈಲ್ ಸಂ. 7400445147) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ, ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ. ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

**ದಿನಾಂಕ: 13.07.2024, ಸ್ಥಳ: ಬೆಂಗಳೂರು ಗ್ರಾಮಾಂತರ** — **ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**

**IN THE COURT OF THE ADDITIONAL FAMILY JUDGE AT TUMAKURU**

**MC. No. 274/2023**

**BETWEEN: MAHESHKUMAR @ RUDRESH ... PETITIONER -V/s-**
**AND: SMT. NIRMALA ... RESPONDENT**

**NOTICE**

**SMT. NIRMALA,** W/o Maheshkumar @ Rudresh, D/o Prasannakumar, aged about 30 years, Residing at Gouragondanahalli village, Kora Hobli, Tumakuru Taluk and District

The petitioner has filed the petition in MC. No. 274/2023 on the file of I Additional Family court Judge at Tumakuru, seeking relief of decree of divorce by dissolving their marriage held on 26/04/2012 at Yellamma Devi and Shree Chowdeshwari Devastana, Hulikal, Magadi Taluk, Ramanagara District as per section 13(1) (ia) (ib) of the Hindu Marriage Act, and you are made as respondent in the above case and the Hon'ble court has posted the above case for your appearance, hence you being the respondent in the above case, therefore you are required to be appeared in person or through pleader on **09/08/2024** at **11:00 A.M** before The I Additional Family court Judge at Tumakuru to defend the suit and in default of your appearance on the day specified above, the suit will be heard by placing you ex-parte.

Given under my hand and the seal of the court on this 10/07/2024

By order of the Court, Chief Ministerial Officer, Principal Judge, Family Court, Tumkur

Advocate for Plaintiffs: **Sri M.R. NAVEEN**
#85/1, Sri Venkateshwara Nilaya, Byraveshwaranagara, Near Sondekoppa Circle, Nelamangala Town, Nelamangala-562123. Bangalore Rural District.

**IN THE COURT OF THE VI ADDITIONAL DISTRICT AND SESSION JUDGE BENGALURU RURAL DISTRICT AT BENGALURU**

**P & SC.No. 41/2024**

**BETWEEN : Smt. Paravathamma** D/o late Chinnappa, Aged about 50 years, Residing at Maliyappanahalli Village, Nandagudi Hobali, Hosakote Taluk, Bengaluru Rural District. **...Petitioner**

**AND : Nil ...Respondents**

WHEREAS, the above named petitioner has made a petition to this court U/s. 276 R/w 372 of Indian Succession Act 1925 for probate of the will in respect of list of Schedule property of late Smt. Bachamma W/o late Narayanappa, who expired on 28-01-2019 by executing the Will Dated 07-12-2018 in favour of Paravathamma D/o late Chinnappa in any interested parties are hereby warned to appear in this court in person or by a pleader duly instructed **on 29.08.2024 at 11.00 AM** to show caused against the petition failing will the matter will be heard and determined ex-party.

**SCHEDULE PROPERTY**

All that piece and parcel of property bearing Sy. No. 23, measuring 1-00 Acre out of 112 acre 23 guntas, situated at Karapanahalli Village, Nandagudi Hobali, Hosakote Taluk, and bounded on

**East by :** Muniyappa Land, **West by :** Dyavappa Land, **North by :** Private Land, **South by :** Private Land.

Given under my hand and seal of the court this 11.07.2024.

**By Order of the Court, Chief Administrative Officer, District and Sessions Court, Bengaluru Rural District, Bengaluru**

**B.G. Ganesh Murthy,** Advocate
# 5th A Cross, Behind Court Complex, I.B. Road, M.V Extension, Hosakote-562114.

ಕನ್ನಡಪ್ರಭ ಚಿತ್ರಪ್ರಭ
ಪ್ರತಿ ಶುಕ್ರವಾರ ಸಿನಿಮಾ ಸುದ್ದಿಗಳ ಪುರವಣಿ ಚಿತ್ರಪ್ರಭ